ಶ್ರೀ ಕಡಿದಾಳ್ ಮಂಜಪ್ಪನವರು.—ಖಂಡಿತವಾಗಿ. ಇನ್ನು ಒಂದು ವರ್ಷದಲ್ಲಿ ಅದಷ್ಟು ಕಡಮೆ ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಗಾಗಲೇ ಹೆಚ್ಚು ಕೇಸುಗಳು ಉಳಿದಿರುವ ಕಡೆ ಬೇಗ ಇತ್ಯರ್ಥವಾಗಲು ಕಾರ್ಯಕ್ರಮ ತೆಗೆದುಕೊಂಡಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ತೆಗೆದುಕೊಂಡಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಎಲ್ಲೆಲ್ಲ ?

ಶ್ರೀ ಕಡಿದಾಳ್ ಮಂಜಪ್ಪನವರು.—ನಾನು ಹೋದ ಕಡೆಗಳಲ್ಲೆಲ್ಲಾ ಎಚ್ಚರಿಕೆ ಕೊಟ್ಟಿದ್ದೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಆ ರೀತಿ ಎಚ್ಚರಿಕೆ ಕೊಟ್ಟರುವುದು ಮಾತ್ರ ಈಗ ತೆಗೆದು ಕೊಂಡಿರುವ ಕಾರ್ಯಕ್ರಮವೊ ಅಥವಾ ಇನ್ನೇನಾದರೂ ವಿಶೇಷ ಸಿಬ್ಬಂದಿ ಇಡುವುದು ಮುಂತಾದ ಕಾರ್ಯಕ್ರಮವೇನಾದರೂ ಇದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತವಾದ ತಿಳಿವಳಿಕೆ ಕೊಟ್ಟಿದೆ. ಸಿಬ್ಬಂದಿಯನ್ನು ಕೂಡ ಜಾಸ್ತಿ ಮಾಡಲಾಗಿದೆ.

Tanks constructed in Chikmagalur District.

Q.—443. Srimathi B. L. SUBBAMMA (Chikmagalur-Mudigere).—

Will the Government be pleased to state.—

the number of new tanks constructed in Chikmagalur District during the last four years ?

A.—Sri Kadidal MANJAPPA (Minister for Revenue and Public Works).—Nil.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—" ಕಳೆದ ನಾಲ್ಕು ವರ್ಷಗಳಿಂದಲೂ ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ಹೊಸದಾಗಿ ಎಷ್ಟು ಕೆರೆಗಳು ನಿರ್ಮಿತವಾದುವು " ಎಂದು ಕೇಳಿರುವುದಕ್ಕೆ "ಯಾವುದೂ ಇಲ್ಲ" ಎಂದು ಹೇಳಿದೆ. ಹಾಗಾದರೆ ಇರಿಗೇಷನ್ ಫಂಡಿನಿಂದ ನಮ್ಮ ಜಿಲ್ಲೆಯಲ್ಲಿ ಏನೂ ಮಾಡಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ತಮ್ಮ ಜಿಲ್ಲೆಯಲ್ಲಿ ಮೈನರು ಸಂಸ್ಥಾನದಲ್ಲೇ ಅತಿ ದೊಡ್ಡದಾದ ನೀರಾವರಿ ಯೋಜನೆ ಕೈಗೆಕೊಂಡಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಎಲ್ಲಿ ?

ಶ್ರೀ ಕಡಿದಾಳ್ ಮಂಜಪ್ಪನವರು.—ಲಕ್ಕವಳ್ಳಿಯಲ್ಲಿ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಆದರಿಂದ ಚಿಕ್ಕಮಗಳೂರು ಜಿಲ್ಲೆಗೆ ಅನುಕೂಲವಿಲ್ಲ. ಚಿತ್ರದುರ್ಗಕ್ಕೆ ಮಾತ್ರ ಅನುಕೂಲ ಎಂಬುದು ಗೊತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸ್ವಲ್ಪಮಟ್ಟಿಗೆ ತಮ್ಮ ಜಿಲ್ಲೆಗೂ ಪ್ರಯೋಜನವಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಅದರಿಂದ ನರಸಿಂಹರಾಜಪುರದ ಬೈಲು ಮುಳುಗಿ ಹೋಗುತ್ತದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ಭಾಗ ಹೋಗುತ್ತದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಹೊಸ ಕೆರೆ ಯಾವುದೂ ಮಾಡಿಲ್ಲ. ಹಳೇಕೆರೆಗಳನ್ನಾದರೂ ರಿಪೇರಿ ಮಾಡರಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಮಾಡಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಎಲ್ಲ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ರಿಪೇರಿ ಮಾಡಿರುವುದಕ್ಕೆ ಖರ್ಚಾಗಿರುವ ಹಣ ಸದ್ವಿನಿಯೋಗವಾಗಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

ಶ್ರೀಮತಿ ಬಿ ಎಲ್. ಸುಬ್ಬಮ್ಮನವರು.—ಈಗರಾದರೂ ಹೆಚ್ಚು ನಿಗ ತೆಗೆದುಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಖಂಡಿತ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಇಂಜಿನಿಯರಿಂಗ್ ಇಲಾಖೆಯವರು ತಮ್ಮ ಕೆಲಸಕಾರ್ಯಗಳಲ್ಲ ನರಿಯಾಗಿ ನಿಗಾ ಇಡದಿರುವುದು ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಅನೆ ಬಾಂದ್ಯರ್ ಮತ್ತು ನಿರಾಳದ ಹತ್ತಿರ ಒಂದು ಕೆರೆ ತಯಾರಾಗುತ್ತಿದೆ. ಅದಕ್ಕೆ ಯಾವ ಏಜನ್ಸಿಯಿದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ಮಂಜೂರಾಗಿರುವುದು ಹಿಂದೆ. ಆ ತರಹ ಯಾವುದಾದರೂ ಇದ್ದರೆ ತಿಳಿಸಿ, ವಿಚಾರ ಮಾಡುತ್ತೇವೆ.

Sri D. VENKATESH.—Sir, questions 503 to 509 are all identical and I request that they may all be kindly ordered to be taken up together.

Mr. SPEAKER.—Yes. They may be taken up along with question No. 136.

Prosecutions for Infringement of the Factories Act, 1948.

Q.—136. Sri D. VENKATESH (Gandhinagar).—

Will the Government be pleased to state :—

(a) the number of prosecutions launched for infringement of the Factories Act, 1948, since the time it came into effect;